# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 34/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಬಾಲರಾಜು | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| ತಂದೆ/ಗಂಡನ ಹೆಸರು | ಃ ಶ್ರೀ ಲೇಟ್ ಕೃಷ್ಣಮೂರ್ತಿ | | **29.03.2021** |
| ವಯಸ್ಸು | ಃ 37 ವರ್ಷ | | |
| ವೃತ್ತಿ | ಃ ಅಲ್ಯುಮಿನಿಯಂ ಫ್ಯಾಬ್ರಿಕೇಷನ್ ಕೆಲಸ | | ಪ್ರಾ.ಸಾ. ಃ 24 |
| ವಾಸಸ್ಥಳ | ಃ ಮೈಸೂರು | | ಚಾ.ಸಾ. ಃ 36 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

*1.* ನಾನು ಮತ್ತು ಮೃತ ರಾಜು ಸಹಪಾಠಿಯಾಗಿ ವಿದ್ಯಾಭ್ಯಾಸ ಮಾಡಿದ್ದೇವೆ. ಮೃತ ರಾಜು ಅವರು ಎಲೆಕ್ಟ್ರಿಕಲ್ ಕೆಲಸ ಮಾಡುತ್ತಿದ್ದರು. ನಾನು ಅಲ್ಯುಮಿನಿಯಂ ಫ್ಯಾಬ್ರಿಕೇಷನ್ ಕೆಲಸ ಮಾಡುತ್ತಿದ್ದೆ. ಸುಮಾರು *4* ವರ್ಷಗಳ ಹಿಂದೆ ರಾತ್ರಿ *08.30* ರ ವೇಳೆಗೆ ರಾಜು ಅವರ ಕೊಲೆ ಆದ ಬಗ್ಗೆ ಮಾಹಿತಿ ಬಂದಿತ್ತು. ನಾನು ಕೆ ಆರ್ ಆಸ್ಪತ್ರೆಗೆ ಹೋಗಿದ್ದೆ. ಮೃತನ ಶವ ನೋಡಲು ಸಿಕ್ಕಿಲ್ಲ. ರಾಜುವನ್ನು ಕೊಲೆ ಮಾಡಿದ ಕಾರಣ ತಿಳಿದಿಲ್ಲ. ರಾಜು ಅವರು ಸಂಘಟಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಗೊತ್ತಿಲ್ಲ. ಆರೋಪಿಗಳನ್ನು ನಾನು ನೋಡಿಲ್ಲ. ಪೋಲಿಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನಿಪಿ-*15* ರಲ್ಲಿ ನಿಪಿ-*15(ಬಿ)* ನಂತೆ ಎಸಿಪಿ ಗೋಪಾಲ ಅವರು ನನ್ನ ಸಹಿ ಪಡೆದಿದ್ದಾರೆ. ನನ್ನ ಸವಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

**1.** ರಾಜು ಅವರು ಆರ್ ಎಸ್ ಎಸ್ ಸಂಘಟಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತು ಎಂದರೆ ಸರಿ. **2009** ನೇ ಸಾಲಿನಲ್ಲಿ ಉದಯಗಿರಿ ಪೊ.ಠಾಣೆ ವ್ಯಾಪ್ತಿಗೆ ಒಳಪಡುವ ಕ್ಯಾತಮಾರನಹಳ್ಳಿಯ ರಾಜು ಅವರ ಮನೆಯ ಬಳಿ ಇರುವ ಹಲೀಮ ಸಾಧಿಯ ಎಜುಕೇಷನ್ ಟ್ರಸ್ಟ್ ನ ಮದರಸದ ಕಟ್ಟಡದಲ್ಲಿ ಅಕ್ರಮವಾಗಿ ಮಸೀದಿ ಕಟ್ಟುತ್ತಿದ್ದ ಬಗ್ಗೆ ರಾಜು ಅವರು ಕಾನೂನು ಬದ್ಧವಾಗಿ ಹೋರಾಟ ಮಾಡುತ್ತಿದ್ದ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆಗೆ ಸಂಬಂಧವಾಗಿ ರಾಜು ಮತ್ತು ಇತರರ ವಿರುದ್ಧ ಪ್ರಕರಣ ದಾಖಲು ಆಗಿತ್ತು ಎಂದರೆ ಸರಿಯಲ್ಲ. ಅದೇ ಕಾರಣ ಮುಸ್ಲಿಂ ಸಮುದಾಯದವರು ರಾಜುವನ್ನು ದ್ವೇಷ ಮಾಡುತ್ತಿದ್ದ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**2.** ಹುಣಸೂರು ಜೋಡಿ ಹುಡುಗರ ಕೊಲೆ ಪ್ರಕರಣದಲ್ಲಿ ಆರೋಪಿಗಳು ಹಾಗೂ ಅವರ ಕಡೆಯವರು ರಾಜು ಅವರಿಗೆ ಬೆದರಿಕೆ ಹಾಕಿದ್ದು ನನಗೂ ಭಯ ಇದ್ದು ರಾಜು ಅವರು ನನಗೆ ಧೈರ್ಯ ನೀಡುತ್ತಿದ್ದ ಬಗ್ಗೆ ಮತ್ತು ಪೋಲಿಸರಿಗೆ ದೂರು ನೀಡುವಂತೆ ರಾಜು ಅವರಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ. ದಿನಾಂಕ **13.03.2016** ರಂದು ಉದಯಗಿರಿ ಎಂ ಜಿ ರಸ್ತೆಯಲ್ಲಿ ಇರುವ ವಿನಾಯಕ ಟೀ ಸ್ಟಾಲ್ ಮುಂಭಾಗ ಬೆಂಚಿನ ಮೇಲೆ ಟೀ ಕುಡಿಯುತ್ತಿದ್ದಾಗ ಅಪರಿಚಿತ ವ್ಯಕ್ತಿಗಳು ರಾಜು ಅವರನ್ನು ಕೊಲೆ ಮಾಡಿದ ಬಗ್ಗೆ ನನಗೆ ತಿಳಿದಿದ್ದು ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮುಸ್ಲಿಂ ಜನಾಂಗದ ವ್ಯಕ್ತಿಗಳು ರಾಜು ಅವರನ್ನು ಕೊಲೆ ಮಾಡಿದ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ಮಾಹಿತಿ ಇದ್ದರೂ ಸಹ ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**3.** ರಾಜು ಅವರು ಹಿಂದೂಪರ ಹೋರಾಟ ಮಾಡುತ್ತಿದ್ದ ಕಾರಣ ಅವರ ಕೊಲೆ ಮಾಡಿದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಮುಸ್ಲಿಂ ಜನಾಂಗದ ಯುವಕರು ರಾಜು ಅವರನ್ನು ಕೊಲೆ ಮಾಡಿದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ದಿನಾಂಕ **25.04.2016** ರಂದು ನಿಪಿ-**15** ರಂತೆ ಮಾಡಿದ ಮಹಜರ್ ಕಾಲದಲ್ಲಿ ನಾನು ಹಾಜರು ಇದ್ದು ನಿಪಿ-**15** ರ ಅಂಶಗಳನ್ನು ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-**15** ರಲ್ಲಿ ವಿವರಿಸಿದ ವಸ್ತುಗಳನ್ನು ನನ್ನ ಸಮಕ್ಷಮ ವಶಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಈಗೆ ತೋರಿಸಿದ ಮು.ಮಾ **07** ರಿಂದ **13** ವಸ್ತುಗಳನ್ನು ನನ್ನ ಸಮಕ್ಷಮ ವಶಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ನಿಪಿ-**38** ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿಗಳ ಪರ ವಕೀಲರಿಂದ:- ಇಲ್ಲ.**

*ಮರು ವಿಚಾರಣೆ:- ಇಲ್ಲ.*

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು.*